**ಬರವಣಿಗೆಯಲ್ಲಿ ತೊಡಗಿಕೊಳ್ಳುವ ಲೇಖಕನ ನೈತಿಕ ಬಿಕ್ಕಟ್ಟಿನ ಬಗೆಗೆ ಯೋಗಪ್ಪನವರ್ ಗಂಭೀರವಾಗಿ ಆಲೋಚಿಸಿದ್ದರು. ಲೇಖಕನೊಬ್ಬ ತನ್ನ ಬರವಣಿಗೆಯಲ್ಲಿ ಪ್ರಾಮಾಣಿಕವಾಗಿರುವುದು ಎಂದರೆ, ತಾನು ನೋಡಿದ ಇಲ್ಲವೆ ತಾನೇ ಎಸಗಿದ ಗುನ್ನೆಯ ನಿಜವಾದ ಸಾಕ್ಷಿ ಹೇಳುವುದು ಎಂದು ಅವರು ದೃಢವಾಗಿ ನಂಬಿದ್ದರು.**

**reserved** ಸ್ವಭಾವದವರೂ ಆಗಿರಲಿಲ್ಲ. ಅವರು ಖಾಸಗಿಯಾಗಿ ಕುಳಿತು ಹರಟುವುದರಲ್ಲಿ ಸುಖವನ್ನು ಕಾಣುತ್ತಿದ್ದರು. ಅವರ ಒಡನಾಟಕ್ಕೆ ಬಂದವರೆಲ್ಲ ಅವರ ಆತಿಥ್ಯದ ಸುಖವನ್ನು ಅನುಭವಿಸಿದವರಾಗಿದ್ದಾರೆ. ಊಟದ ನೆಪ ಮಾಡಿ ಯಾವುದಾದರೂ ಹೋಟೆಲ್‌ನಲ್ಲಿ ಕುಳಿತುಕೊಂಡು ತಾಸೆರಡು ತಾಸು ಚರ್ಚೆ ಮಾಡುವುದು, ಹರಟೆ ಹೊಡೆಯುವುದು ಅವರ ಅತ್ಯಂತ ಪ್ರೀತಿಯ ಹವ್ಯಾಸ. ಊಟದ ತಟ್ಟೆಯೊಳಗಿನ ಖಾದ್ಯವನ್ನು ಸವಿಯುತ್ತಲೇ ಸಾಹಿತ್ಯದ ಕುರಿತಾದ ಚರ್ಚೆಯ ಅಂಗಳದಲ್ಲಿ ಬುದ್ಧ, ಅಲ್ಲಮ, ರೂಮಿ, ನಾಗಾರ್ಜುನ, ಮಾರಿಯೊ ಪ್ಯೂಜೊ, ಬೋದಿಲೇರ್ ಮುಂತಾದವರು ಬಂದು ಹೋಗುತ್ತಿದ್ದರು. ಅವರೊಂದಿಗಿನ ಡಿನ್ನರ್‌ನ ಸಮಯವೆಂದರೆ ಹತ್ತಾರು ಚಿಂತಕರ ದರ್ಶನವೆಂದು ಹೇಳಬೇಕು. ಇದಕ್ಕೆ ತದ್ವಿರುದ್ಧವಾದ ಸನ್ನಿವೇಶವನ್ನು ಅವರು ತಮ್ಮ ಖಾಸಾ ಗೆಳೆಯರ ಜೊತೆ ಡಿನ್ನರ್‌ಗೆ ಸೇರಿದಾಗ ನೋಡಬಹುದಿತ್ತು. ಗೆಳೆಯರೆಲ್ಲ ಸೇರಿ ಹದಿಹರೆಯದ ದಿನಗಳ ತಮ್ಮ ತಮ್ಮ ಲೀಲೆಗಳನ್ನು ನೆನಪಿಸಿಕೊಂಡು ಒಬ್ಬರ ಕಾಲನ್ನು ಇನ್ನೊಬ್ಬರು ಎಳೆಯುತ್ತ **hilarious** ಎನ್ನುವಂತಹ ದೃಶ್ಯವನ್ನು ನಿರ್ಮಿಸುತ್ತಿದ್ದರು. ಛತ್ತು ಹಾರಿಹೋಗುವ ಹಾಗೆ ನಗು ಹಾಗೂ ಹುಡುಗಾಟಿಕೆಯ ಅಬ್ಬರ ಅಲ್ಲಿರುತ್ತಿತ್ತು. ಮಧ್ಯವಯಸ್ಸನ್ನು ದಾಟಿದ ಅನಂತರವೂ ಬನಶಂಕರಿ ಜಾತ್ರೆಯಲ್ಲಿ ಅವರ ಗೆಳೆಯರ ಟೋಳಿ ಸೇರಿ ಹೊರಟಿತೆಂದರೆ, ಕಾಲೇಜ್ ವಿದ್ಯಾರ್ಥಿಗಳ ಒಂದು ಬಿಂದಾಸ್ ಗ್ಯಾಂಗ್ ಹೊರಟಂತೆ ಕಾಣುತ್ತಿತ್ತು. ಅಂಥದ್ದನ್ನು ನೋಡಿದಾಗ ಸಭೆ ಸಮಾರಂಭಗಳನ್ನು, ವೇದಿಕೆಗಳನ್ನು ನಿರಾಕರಿಸಿದವರು ಇವರೇನಾ? 'ಪ್ರೀತಿ ಎಂಬುದು ಚಂದ್ರನ ದಯೆ', 'ಶೋಧ'ದಂತಹ ಗಂಭೀರ ಕಾದಂಬರಿಗಳ ಕರ್ತೃ ಇವರೇನಾ? ಎಂಬ ಸಂಶಯ ನಮ್ಮಲ್ಲಿ ಮೂಡುತ್ತಿತ್ತು.

ಅವರು ಕೆ.ಎ.ಎಸ್. ಪರೀಕ್ಷೆ ಬರೆದು 1974ರಲ್ಲಿ ಹಾವೇರಿ ತಾಲ್ಲೂಕಿನ ತಹಶೀಲ್ದಾರರಾಗಿ ಸೇವೆ ಪ್ರಾರಂಭಿಸಿದರು. ಅಷ್ಟೊತ್ತಿಗೆ ಅವರ ವಿದ್ಯಾರ್ಥಿಗಳಲ್ಲಿ ನಾವು ಕೆಲವರು ಧಾರವಾಡದ ಕರ್ನಾಟಕ ಕಾಲೇಜು ಸೇರಿಕೊಂಡಿದ್ದೆವು. ಜಿಲ್ಲಾ ಕೇಂದ್ರವಾದ ಧಾರವಾಡಕ್ಕೆ ಕೆಲಸದ ನಿಮಿತ್ತ ಬಂದಾಗಲೆಲ್ಲ ಅವರು ನಮ್ಮನ್ನು ತಪ್ಪದೆ ಭೆಟ್ಟಿಯಾಗುತ್ತಿದ್ದರು. ಹಾವೇರಿಗೆ ಬರಲು ನಮ್ಮನ್ನು ಆಮಂತ್ರಿಸುತ್ತಿದ್ದರು ಮತ್ತು ಆಗ್ರಹಿಸುತ್ತಿದ್ದರು. ನಾವು ಹಾವೇರಿಗೆ ಬಂದು ಹೋಗಿ ಮಾಡುವುದು ತಡವಾದರೆ 'ಒಗೆದ ಕಲ್ಲಿನ ಹಾಗೆ ಆ ಕಡೆಗೇ ಹೋಗಬೇಡಿರಿ. ವಿದ್ಯಾರ್ಥಿ ಬಳಗವನ್ನು ನಿಮ್ಮ ಗುರುಗಳು ನೆನಪಿಸಿಕೊಳ್ಳುತ್ತಿರುತ್ತಾರೆ' ಎಂದು ಶ್ರೀಮತಿ ಯೋಗಪ್ಪನವರ್ ಅವರು ನಮ್ಮನ್ನು ಎಚ್ಚರಿಸುತ್ತಿದ್ದರು. ತಹಶೀಲ್ದಾರರೊಬ್ಬರು ಎಷ್ಟು ಸಾದಾ ಸೀದಾ ಇರಬಹುದು ಎನ್ನುವುದಕ್ಕೆ ಮಾದರಿಯೆನ್ನುವಂತೆ ಹಾವೇರಿಯಲ್ಲಿ ಅವರು ಸೇವೆ ಸಲ್ಲಿಸಿದರು. ಬಡವರ ಮತ್ತು ಬೆಂಬಲವಿಲ್ಲದವರ ಸಂಕಷ್ಟಗಳಿಗೆ ಅವರು ಸ್ಪಂದಿಸಿದರು. 'ಆಫೀಸುಗಳ ಕಂಪೌಂಡಿಗೆ ಹುಟ್ಟಿ'ದಂತೆ ವರ್ತಿಸುವ ಮಧ್ಯವರ್ತಿಗಳ, ಕುಂಟಲಗಿತ್ತಿಗಳ ಜಾಲಕ್ಕೆ ಸಿಕ್ಕದ ಹಾಗೆ ಅವರನ್ನು ರಕ್ಷಿಸಿದರು. ಒಂದು ಉದಾಹರಣೆ ಉಲ್ಲೇಖಿಸಬೇಕೆಂದರೆ,